ಸಾಕ್ಷಿಯನ್ನು ದಿಃ **02.09.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಆರ್ ಪರ ಕುಮಾರಿ ಎಂ ಆರ್ ವಕೀಲರಿಂದಃ-

ನಾನು ಈ ದಾವೆಯಲ್ಲಿ ವಾದಿಯಾದ ಓರ್ವ ವಾರಸುದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ.

ದಿನಾಂಕ 07.05.2014 ರ ಮೂಲ ಕ್ರಯದ ಕರಾರನ್ನು ಹಾಜರುಪಡಿಸಿದ್ದು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಸಾಕ್ಷಿಯು ತನ್ನ ಪತ್ನಿಯ ಸಹಿಗಳನ್ನು ಎಲ್ಲಾ ಪುಟಗಳಲ್ಲಿಯೂ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 1(ಎ) ಎಂದು ಗುರುತಿಸಲಾಯಿತು. ದಿನಾಂಕ 19.08.2014 ರಂದು ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ 2 ಎಂದು, ಸದರಿ ನೋಟೀಸ್ ನ್ನು ಕಳುಹಿಸಿದ ಬಗ್ಗೆ 15 ಅಂಚೆ ರಶೀದಿಗಳನ್ನು ನಿಪಿ 3 ರಿಂದ 17 ಎಂದು, 10 ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ 18 ರಿಂದ 27 ಎಂದು ಗುರುತಿಸಲಾಯಿತು. 2 ರಿಂದ 8 ನೇ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನೀಡಿದ ಜವಾಬು ನೋಟೀಸ್ ನ್ನು ನಿಪಿ 28 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.